ದಿ: 09.10.2025 ರಂದು ವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು</u>**: 3ನೇ ಪ್ರತಿವಾದಿ ಪರ ಶ್ರೀಯುತ ಡಿ.ವಿ.ಎಸ್ ವಕೀಲರಿಂದ.

13. ಸರ್ವೆ ನಂ.30 ಜಮೀನು ದೇಕಾ ರವರಿಂದ ನಮಗೆ ಬಂದಿದೆ ಎಂದು ತೋರಿಸುವ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ರೀತಿ ಮರಣ ಪ್ರಮಾಣ ಪತ್ರ ಮತ್ತು ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ. ನಿಪಿ.೪ ರಲ್ಲಿ ದೇಕಾ ರವರ ಹೆಸರು ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ.2 ರಲ್ಲಿ ದೇಖಾ ರವರ ಹೆಸರು ಇರುವುದಿಲ್ಲ ಎಂದರೆ ಸರಿ. ನಿಪಿ.3 ರಲ್ಲಿ ಮುತ್ಯಾಲಮ್ಮ ಕೋಂ ಮುನಿತಾಯಪ್ಪ ಎಂದು ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ಮುತ್ಯಾಲಮ್ಮ ರವರ ತಂದೆಯ ಹೆಸರನ್ನು ಕಾಣಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.3 ಪ್ರಕರಣದಲ್ಲಿ ದೇಕಾ ಅಥವಾ ಮುತ್ಯಾಲಮ್ಮರವರಿಗೆ ನೋಟಿಸ್ಸು ನೀಡಿದ ಕುರಿತು ಯಾವುದೇ ನೋಟಿಸ್ಸು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆ ರೀತಿ ನಿಪಿ.೩ ಪ್ರಕರಣದಲ್ಲಿ ದೇಕಾ ಮತ್ತು ಮುತ್ಯಾಲಮ್ಮರವರಿಗೆ ನೋಟಿಸ್ಸು ನೀಡಿದ್ದಾರೆ ಎನ್ನುವ ಕುರಿತಾದ ನೋಟಿಸ್ಸು ನನ್ನ ಬಳಿ ಇರುತ್ತದೆ. ಸದರಿ ನೋಟಿಸ್ಸಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮಂಜೂರಾತಿ ಆದೇಶ ಪತ್ರವನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.3 ಪ್ರಕರಣದ ನಡವಳಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸರ್ವೆ ನಂ.30 ಜಮೀನು ದೇಕಾ ರವರಿಂದ ನಮಗೆ ಬಂದಿದೆ ಎಂದು ತೋರಿಸುವ ಕುರಿತು ನಮ್ಮ ಬಳಿ ಯಾವುದೇ ದಾಖಲೆಗಳು ಇರದ ಮೇರೆಗೆ ಆ ಕುರಿತಾದ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

14. ನಿಪಿ.3 ರಲ್ಲಿ ನನ್ನ ತಂದೆ ಮತ್ತು ದೊಡ್ಡಪ್ಪನ ಹೆಸರು ಇರುತ್ತದೆ ಎಂದರೆ ಸರಿ. ನಿಪಿ.3 ರ ಪುಟ ಸಂಖ್ಯೆ 4ರ ಕಲಂ 4ರಲ್ಲಿ ಕಾಣಿಸಿರುವ ಮುನಿನಾರಾಯಣಪ್ಪ ಬಿನ್ ವಾಯಿಮುನಿತಾಯಗ ಮತ್ತು ಮುನಿಶ್ಯಾಮಿಗ ಎನ್ನುವವರು ಪ್ರಸ್ತುತ ದಾವೆಯ ೧ ಮತ್ತು 2ನೇ ವಾದಿಗಳು ಎಂದರೆ ಸರಿ. ನಿಪಿ.3 ರಲ್ಲಿ ಕಾಣಿಸಿರುವ ಗುಳ್ಳೆ ಮುನಿಗ ಎನ್ನುವವರು ದಾವಾ ಆಸ್ತಿಯ ಮೂಲ ಮಾಲೀಕರು ಎಂದರೆ ಸರಿ. ಸದರಿ ಗುಳ್ಳೆ ಮುನಿಗ ರವರಿಂದ ೧ ಮತ್ತು ೨ನೇ ವಾದಿಗೆ ಜಮೀನು ಬಂದಿರುತ್ತದೆ ಎಂದರೆ ಸರಿ.

15. ಈಗ ನನಗೆ ತೋರಿಸಿದ ದಾಖಲೆಯಲ್ಲಿ ಕಾಣುತ್ತಿರುವ ವ್ಯಕ್ತಿಗಳು ನನ್ನ ತಂದೆ ಮತ್ತು ದೊಡ್ಡಪ್ಪ ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿ.ಡಿ.1 ಎಂದು ಗುರುತಿಸಲಾಯಿತು. ನಿ.ಡಿ.1 ರಂತೆ ನನ್ನ ತಂದೆ ಮತ್ತು ಇತರರು ಸರ್ವೆ ನಂ.30 ವಿಸ್ತೀರ್ಣ ಮುವತ್ತುಕಾಲು ಗುಂಟೆ ಜಮೀನ್ನನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಈಗ ನನಗೆ ತೋರಿಸಿದ ದಾಖಲೆಯಲ್ಲಿರುವ ಮುನಿನಾರಾಯಣಿಗ ಮತ್ತು ಮುನಿಶ್ಯಾಮಿಗ ರವರುಗಳು ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿ.ಡಿ.2 ಎಂದು ಗುರುತಿಸಲಾಯಿತು. ನಿಪಿ.8 ರಲ್ಲಿ ಮುತ್ಯಾಲಮ್ಮ ಕೋಂ ಮುನಿಯಪ್ಪ ಎಂದು ಕಾಣಿಸಲಾಗಿರುತ್ತದೆ ಎಂದರೆ ಸರಿ. ಮುತ್ಯಾಲಮ್ಮ ರವರು ಯಾವ ದಿನಾಂಕದಂದು ಮೃತಪಟ್ಟಿರುತ್ತಾರೆ ಎಂದು ಹೇಳಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ದಿ: 05.06.1995 ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ಮುತ್ಯಾಲಮ್ಮ ಕೋಂ ಮುನಿಯಪ್ಪ ಎಂದು ತಪ್ಪಾಗಿ ನಮೂದಿಸಲಾಗಿರುತ್ತದೆ ಎಂದು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ನಾನು ಮುತ್ಯಾಲಮ್ಮರವರ ವಂಶವೃಕ್ಷವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.30 ರಲ್ಲಿ

ನನ್ನ ತಂದೆ ಮತ್ತು ದೊಡ್ಡಪ್ಪನ ಭಾಗಕ್ಕೆ ಬಂದಂತಹ ಆಸ್ತಿಯನ್ನು ಮಾರಾಟ ಮಾಡಿದ್ದರು ಪ್ರತಿವಾದಿಗಳು ಖರೀದಿಸಿರುವ ಆಸ್ತಿಯನ್ನು ಕಬಳಿಸುವ ಸಲುವಾಗಿ ಸುಳ್ಳು ದಾವೆಯನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

16. ವಾದ ಪತ್ರದಲ್ಲಿ ಕಾಣಿಸಿರುವ ದಾವಾ ಆಸ್ತಿಯ ಚಕ್ಕುಬಂದಿಗೆ ಮತ್ತು ನಿಪಿ.1 ರಲ್ಲಿ ಕಾಣಿಸಿರುವ ಚಕ್ಕುಬಂದಿಗೆ ವ್ಯತ್ಯಾಸಗಳು ಇರುವುದರಿಂದ ನನಗೆ ಪ್ರಸ್ತುತ ದಾವೆಯ ಕುರಿತು ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ದಾವಾ ಆಸ್ತಿಯ ಸ್ವಾಧೀನದಲ್ಲಿದ್ದೇವೆ ಎಂದು ತೋರಿಸುವ ಕುರಿತು ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮಂಜೂರಾತಿ ಆದೇಶದ ಪ್ರತಿಯನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. 1997 ನೇ ಸಾಲಿನಲ್ಲಿ 3ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಖರೀದಿಸಿದ ದಿನದಿಂದ ದಾವಾ ಆಸ್ತಿಯ ಎಲ್ಲಾ ದಾಖಲೆಗಳು 3ನೇ ಪ್ರತಿವಾದಿಯ ಹೆಸರಿನಲ್ಲಿ ನಮೂದಾಗಿ ಮುಂದುವರೆದುಕೊಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಯ ಕಂದಾಯ ದಾಖಲೆಗಳು 3ನೇ ಪ್ರತಿವಾದಿ ಹೆಸರಿಗೆ ನಮೂದು ಮಾಡಿದ ಕುರಿತು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ ಎಂದರೆ ಸಾಕ್ಷಿಯು ೩ನೇ ಪ್ರತಿವಾದಿ ನನ್ನ ತಂದೆ ಮತ್ತು ದೊಡ್ಡಪ್ಪನಿಗೆ ಬೆದರಿಕೆ ಹಾಕುತ್ತಿದ್ದ ಮೇರೆಗೆ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಆ ರೀತಿ 3ನೇ ಪ್ರತಿವಾದಿ ನಿಮ್ಮ ತಂದೆ ಮತ್ತು ದೊಡ್ಡಪ್ಪನಿಗೆ ಬೆದರಿಕೆ ಹಾಕಿದ ಕುರಿತು ಪೊಲೀಸ್ ಪಿರ್ಯಾದ್ದು ನೀಡಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು 2011 ನೇ ಸಾಲಿನಲ್ಲಿ ಒಂದು ಬಾರಿ ಪಿರ್ಯಾದ್ದು ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಆ ರೀತಿ ೩ನೇ ಪ್ರತಿವಾದಿಯು ೧ ಮತ್ತು ೨ನೇ ವಾದಿಗಳು ದಾವಾ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ತೊಂದರೆ ಮಾಡಿದ್ದರು ಎಂದು ಹೇಳುವ ದಿನಾಂಕ ಹೇಳಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು 2011 ನೇ ಸಾಲಿನ 5 ಅಥವಾ 6ನೇ ತಿಂಗಳು ಎಂದು ನುಡಿಯುತ್ತಾರೆ.

17. ನಿಪಿ.9 ಮತ್ತು 10ನ್ನು ದಿ: 14.10.2011 ರಂದು ಪಡೆದುಕೊಂಡಿರುತ್ತೇನೆ ಎಂದರೆ ಸಾಕ್ಷಿಯು ನನ್ನ ತಂದೆ ಮತ್ತು ದೊಡ್ಡಪ್ಪನಿಗೆ ತಿಳಿದಿದೆ ಎಂದು ನುಡಿಯುತ್ತಾರೆ. 1997 ನೇ ಸಾಲಿನಲ್ಲಿ 3ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಖರೀದಿಸಿದ ವಿಚಾರ ನನಗೆ ಮತ್ತು ನನ್ನ ತಂದೆ ಹಾಗೂ ದೊಡ್ಡಪ್ಪನಿಗೆ ತಿಳಿದಿತ್ತು ಎಂದರೆ ಸರಿಯಲ್ಲ. 3ನೇ ಪ್ರತಿವಾದಿಯು ದಾವಾ ಆಸ್ತಿಯ ಸ್ವಾಧೀನದಲ್ಲಿದ್ದರು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ವ್ಯಾಜ್ಯ ಕಾರಣವನ್ನು ಉಂಟು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರದ ಮೇರೆಗೆ ದಾವಾ ಆಸ್ತಿಯ ಕಂದಾಯ ದಾಖಲೆಗಳು ನಮ್ಮ ಹೆಸರಿಗೆ ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.5 ಮತ್ತು ಪ್ರಸ್ತುತ ದಾವೆಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

18. ನಿಪಿ.2 ವಂಶವೃಕ್ಷಕ್ಕೆ ಯಾವಾಗ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ನನಗೆ ನೆನಪಿಲ್ಲ. ನಿಪಿ.2 ವಂಶವೃಕ್ಷಕ್ಕೆ ಸಲ್ಲಿಸಿದ ಅರ್ಜಿಯ ಜೊತೆ ಸಲ್ಲಿಸಿದ್ದ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇರಲು ನನಗೆ ಯಾವುದೇ ಅಭ್ಯಂತರ ಇರಲಿಲ್ಲ. ನಮಗೆ ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿದ್ದ ಆಸ್ತಿಗಳನ್ನು ಮಾರಾಟ ಮಾಡಿದ್ದರು ೩ನೇ ಪ್ರತಿವಾದಿಯ ಆಸ್ತಿಯನ್ನು ಕಬಳಿಸುವ ಸಲುವಾಗಿ ಸುಳ್ಳು ವಿಚಾರಗಳನ್ನು ಕಾಣಿಸಿ ಸುಳ್ಳು ದಾವೆಯನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.